# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

# Karnataka State Road Transport Corporation

ಕೇಂದ್ರ ಕಚೇರಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560 027

**Central Offices, K.H. Road, Shanthinagar, Bangalore – 560 027**

ಜಾಹೀರಾತು ಸಂ.1/2016 ದಿನಾಂಕ 06.01.2016 and ಜಾಹೀರಾತು ಸಂ.2/2016 ದಿನಾಂಕ 06.01.2016

Notification No.1/2016 dated 06.01.2016 and Notification No.2/2016 dated 06.01.2016

## ಅಭ್ಯರ್ಥಿಗಳು ONLINE ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು

**ಹಂತ 1:** ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ www.ksrtcjobs.com ಅನ್ನು ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಮೇಲೆ NOTIFICATION ಎಂದು ಮೂಡುತ್ತದೆ. ಕ್ಲಿಕ್ ಮಾಡಿದರೆ ಜಾಹೀರಾತು ತೆರೆಯುತ್ತದೆ. ಅದರಲ್ಲಿ ವಿಭಾಗ, ಹುದ್ದೆಗಳ ಸಂಖ್ಯೆ, ಮೀಸಲಾತಿ, ಶುಲ್ಕ ವಿವರ, ವಯೋಮಿತಿ, ಅರ್ಜಿ ಸಲ್ಲಿಸುವ ವಿಧಾನ, ಇತ್ಯಾದಿ ಲಭ್ಯವಾಗಲಿದ್ದು, ಅಭ್ಯರ್ಥಿಗಳು ಜಾಹೀರಾತಿನಲ್ಲಿನ ಎಲ್ಲಾ ವಿವರಗಳನ್ನು ಮತ್ತು ಅರ್ಜಿ ಸಲ್ಲಿಸುವ ಸೂಚನೆಗಳನ್ನು ತಪ್ಪದೇ ಓದಿಕೊಂಡು ಅದರಂತೆ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

⇩

**ಹಂತ 2:** ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಭ್ಯರ್ಥಿಯು ತನ್ನ ಇತ್ತೀಚಿನ ಭಾವಚಿತ್ರವನ್ನು ಒಂದು ಸ್ವಚ್ಚವಾದ ಬಿಳಿ ಹಾಳೆಯ ಮೇಲೆ ಲಗತ್ತಿಸಿ ಈ ಕೆಳಗಿನ ಅಳತೆ ಪ್ರಕಾರ ಸ್ಕ್ಯಾನ್ ಮಾಡಿ ಇಟ್ಟುಕೊಂಡಿರತಕ್ಕದ್ದು. ನಂತರ ಅದೇ ರೀತಿ ಕಪ್ಪು ಶಾಯಿಯ ಸ್ಕೆಚ್/ಮಾರ್ಕರ್ ಪೆನ್ನಿನಿಂದ ಸಹಿ ಮಾಡಿ ಈ ಕೆಳಗಿನ ಅಳತೆ ಪ್ರಕಾರ ಸ್ಕ್ಯಾನ್ ಮಾಡಿ ಇಟ್ಟುಕೊಂಡಿರತಕ್ಕದ್ದು.

<table>
<tr><td>ಫೈಲ್ ಅಳತೆ<500 ಕೆಬಿ</td><td rowspan="4">ಪಾಸ್ ಪೋರ್ಟ್ ಭಾವಚಿತ್ರದ ಅಳತೆಗಳು:<br>45 ಎಂ.ಎಂ (ಉದ್ದ) * 35 ಎಂ.ಎಂ. (ಅಗಲ)<br>ಸಹಿ ಅಳತೆ:<br>20 ಎಂ.ಎಂ (ಉದ್ದ) * 35 ಎಂ.ಎಂ. (ಅಗಲ)</td></tr>
<tr><td>ಇಮೇಜ್ ಅಳತೆ=100%</td></tr>
<tr><td>ಕಲರ್</td></tr>
<tr><td>ಜೆಪಿಇಜಿ/ಜೆಪಿಜಿ (JPEG/JPG)</td></tr>
</table>

⇩

**ಹಂತ 3:** ಅರ್ಜಿಯನ್ನು ಭರ್ತಿ ಮಾಡಿದ ನಂತರ Application Preview ಮೂಡಲಿದ್ದು ನಮೂದಿಸಿರುವ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಬೇಕು. ಅರ್ಜಿಯಲ್ಲಿ ನಮೂದಿಸಿರುವ ವಿವರಗಳಲ್ಲಿ ಏನಾದರೂ ತಪ್ಪುಗಳಾಗಿದ್ದಲ್ಲಿ ಅದನ್ನು ಸರಿಪಡಿಸಲು BACK ಮೇಲೆ ಕ್ಲಿಕ್ ಮಾಡಿ ನಂತರ ಅಗತ್ಯ ತಿದ್ದುಪಡಿಗಳನ್ನು ಮಾಡಬಹುದು.

⇩

**ಹಂತ 4:** ಅರ್ಜಿಯಲ್ಲಿ ಭರ್ತಿ ಮಾಡಿರುವ ಎಲ್ಲಾ ವಿವರಗಳು ಸರಿಯಾಗಿರುತ್ತವೆಯೆಂದು ಖಚಿತಪಡಿಸಿಕೊಂಡ ನಂತರ Next ಮೇಲೆ ಕ್ಲಿಕ್ ಮಾಡತಕ್ಕದ್ದು. ನಂತರ ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಭಾವಚಿತ್ರ (Photo) ವನ್ನು ಮತ್ತು ಸಹಿ (ssignature)ಯನ್ನು upload ಮಾಡತಕ್ಕದ್ದು.

⇩

**ಹಂತ 5:** ನಂತರ ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ Post Office Challan ಮೇಲೆ ಕ್ಲಿಕ್ ಮಾಡಿ challan ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. Post office challan ನ್ನು Download ಮಾಡಿಕೊಂಡ ನಂತರ ಅಭ್ಯರ್ಥಿ ಘೋಷಣೆಯನ್ನು ಓದಿ, ಒಪ್ಪಿ Submit ಬಟನ್ ಮೇಲೆ ಕ್ಲಿಕ್ ಮಾಡಿ ಅರ್ಜಿಯ ಪ್ರತಿಯನ್ನು ಕಡ್ಡಾಯವಾಗಿ ಮುದ್ರಿಸಿಕೊಳ್ಳುವುದು.

⇩

**ಹಂತ 6:** ಕರ್ನಾಟಕ ರಾಜ್ಯದಲ್ಲಿನ ಯಾವುದೇ ಇ-ಪಾವತಿ ಅಂಚೆ ಕಚೇರಿಗೆ ಹೋಗಿ, ನಿಗದಿತ ಅರ್ಜಿ ಶುಲ್ಕ+ಸೇವಾ ತೆರಿಗೆ ಪಾವತಿ ಮಾಡಿ. ಅಂತಿಮವಾಗಿ ಪೋಸ್ಟ ಆಫೀಸ್‌ನಿಂದ ಪಾವತಿ ಬಗ್ಗೆ ರಸೀದಿ/ಸ್ಟಿಕ್ಕರ್ ಅನ್ನು challan ಪ್ರತಿಯ ಮೇಲಿನ ಭಾಗದಲ್ಲಿ ಅಂಟಿಸಿ ಹಾಜರು ಪಡೆಸುವುದರಿಂದ ನಿಮ್ಮ ಶುಲ್ಕ ಪಾವತಿಯನ್ನು ದೃಢಪಡಿಸಲಾಗುತ್ತದೆ. ಸದರಿ ಅರ್ಜಿ ಹಾಗೂ ಇ-ಪಾವತಿ ಮಾಡಿದ challan ನ್ನು ಮೂಲ ದಾಖಲಾತಿ ಪರಿಶೀಲನೆ ಸಮಯದಲ್ಲಿ ಹಾಜರು ಪಡಿಸಬೇಕು.

**NOTE:** ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 06.02.2016 ರ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಡಿ.ಡಿ., ಪೋಸ್ಟ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

**ಸೂಚನೆ:**

ವಿದ್ಯಾರ್ಹತೆ, ಚಾಲಕ/ನಿರ್ವಾಹಕ ಪರವಾನಗಿ, ಮೀಸಲಾತಿ ಪ್ರಮಾಣ ಪತ್ರಗಳು, ಇನ್ನಿತರ ಪ್ರಮಾಣ ಪತ್ರಗಳು, ಅಂಕಪಟ್ಟಿಗಳನ್ನು ಅರ್ಜಿ ಹಾಕಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

| | |
|---|---|
| Commencing date for filling the application<br>ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭಿಕ ದಿನಾಂಕ | 14.01.2016 |
| Last date for filling of application<br>ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | 04.02.2016 |
| Last date for payment of fee<br>ಶುಲ್ಕ ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | 06.02.2016 |